# ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಪರೀಕ್ಷಾ ವಿಭಾಗ, ಜ್ಞಾನ ಗಂಗಾ, ದೂರವಾಣಿ ಸಂಖ್ಯೆ: 08472-263203

ಸಂಖ್ಯೆ:ಗುವಿಗು:ಪರೀಕ್ಷಾ:ಸಿ1(14)/2013-14/ 8695 ದಿನಾಂಕ: 07.12.2013

## ಅಧಿಸೂಚನೆ

ವಿಷಯ: ಜನೆವರಿ 2014ರಲ್ಲಿ ನಡೆಯುವ ಸ್ನಾತಕೋತ್ತರ ಪದವಿ Iನೇ ಮತ್ತು IIIನೇ ಸೆಮಿಸ್ಟರ್ ಪರೀಕ್ಷೆಗಳ ಬಗ್ಗೆ.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ 02.12.2013

ಜನೆವರಿ 2014ರಲ್ಲಿ ನಡೆಯುವ ಸ್ನಾತಕೋತ್ತರ ಪದವಿ Iನೇ ಮತ್ತು IIIನೇ ಸೆಮಿಸ್ಟರ್ ಹಾಗೂ ಸ್ನಾತಕೋತ್ತರ ಡಿಪ್ಲೋಮಾ ಪರೀಕ್ಷಾ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಹಾಗೂ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ ಮುಂತಾದ ವಿವರಗಳನ್ನು ತೋರಿಸುವ ಪಟ್ಟಿ.

| ಕ್ರ.ಸಂ. | ಪರೀಕ್ಷೆಗಳು | ಪರೀಕ್ಷಾ ಶುಲ್ಕ ರೂ. | ಅಂಕಪಟ್ಟಿ ಶುಲ್ಕ ಹಾಗು ಅರ್ಜಿ ತಪಾಸಣೆ ಶುಲ್ಕ ರೂ. | ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | | ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕದೊಡನೆ ವಿಭಾಗ/ ಕಾಲೇಜಿನಲ್ಲ ಪರೀಕ್ಷಾ ಅರ್ಜಿ ಸಲ್ಲಿಸಬೇಕಾದ ಅಂತಿಮ ದಿನಾಂಕ | | | ವಿಭಾಗದ ಮುಖ್ಯಸ್ಥರು/ಪ್ರಾಂಶುಪಾಲರು ಪರೀಕ್ಷಾ ಶುಲ್ಕದೊಡನೆ ಅಭ್ಯರ್ಥಿಯ ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಅಂತಿಮ ದಿನಾಂಕ | | |
|---|---|---|---|---|---|---|---|---|---|---|---|
| | | | | ಲಿಖಿತ ಪರೀಕ್ಷೆ ದಿನಾಂಕ | ಪ್ರಾಯೋಗಿಕ ಪರೀಕ್ಷೆ ದಿನಾಂಕ | ದಂಡ ಶುಲ್ಕ ವಿಲ್ಲದೆ | ರೂ.100/- ದಂಡ ಶುಲ್ಕ ಸಹಿತ | ರೂ.750/- ದಂಡ ಶುಲ್ಕ ಸಹಿತ | ದಂಡ ಶುಲ್ಕವಿಲ್ಲದೆ | ರೂ.100/- ದಂಡ ಶುಲ್ಕ ಸಹಿತ | ರೂ.750/- ದಂಡ ಶುಲ್ಕ ಸಹಿತ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **IIIನೇ ಸೆಮಿಸ್ಟರ** | | | | | | | | | | | |
| | 1.ಎಂ.ಎ/ಎಂ.ಕಾಂ/ ಎಂ.ಎ. (ಸೋಸಿಯಲ ವರ್ಕ) ಎಂ.ಎಫ್.ಸಿ./ಎಲ್‌ಎಲ್.ಎಂ/ಎಂ.ಎಫ.ಎ. | 720/- | 50+10 | 20.01.14 | ಲಿಖಿತ ಪರೀಕ್ಷೆ ನಂತರ | 28.12.13 | 04.01.14 | 11.01.14 | 31.12.13 | 07.01.14 | 15.01.14 |

..2/-

| 1 | 2 | 3 | 4 | 5 | 6 | 7 | 8 | 9 | 10 | 11 | 12 |
|---|---|---|---|---|---|---|---|---|---|---|---|
| 2. | ಎಂ.ಎಸ್ಸಿ/ಎಂ.ಎ. (ಮನೋವಿಜ್ಞಾನ)/ಎಂ.ಎಲ್.ಐ.ಎಸ್ಸಿ. | 820/- | 50+10 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| 3. | ಎಂ.ಟೆಕ್ 3 & 5 ಸೆಮಿಸ್ಟರ್ | 820/- | 50+10 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| 4. | ಎಂ.ಪಿ.ಇಡ್ | 1100/- | 50+10 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| 5. | ಎಂ.ಟಿ.ಎ. VII, IX ಸೆಮಿಸ್ಟರ್ | 770/- | 50+10 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| **Iನೇ ಸೆಮಿಸ್ಟರ** | | | | | | | | | | | |
| 1. | ಎಂ.ಎ./ಎಂ.ಕಾಂ ಎಂ.ಎ.(ಸೋಸಿಯಲ ವರ್ಕ) ಎಲ್ಎಲ್.ಎಂ./ಎಂ.ಎಫ.ಸಿ./ಎಂ.ಎಫ.ಎ. | 720/- | 50+10 | 20.01.14 | ಲಿಖಿತ ಪರೀಕ್ಷೆ ನಂತರ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| 2. | ಎಂ.ಎಸ್ಸಿ/ಎಂ.ಎ. (ಮನೋವಿಜ್ಞಾನ)/ ಎಂ.ಎಲ್.ಐ.ಎಸ್ಸಿ/ಎಂ.ಎಡ್ | 820/- | 50+10 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| 3. | ಎಂ.ಪಿ.ಇಡ್ | 1100/- | 50+10 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದಂ |
| 4. | ಎಂ.ಟೆಕ್ | 820/- | 50+10 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| 5. | ಎಂ.ಟಿ.ಎ. I, III ಮತ್ತು Vನೇ ಸೆಮಿಸ್ಟರ್ | 720/- | 50+10 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| 6. | ಪಿ.ಜಿ.ಡಿ.ಸಿ.ಎ. | 1200/- | 50+10 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |
| 7. | ಪಿ.ಜಿ.ಡಿಪ್ಲೋಮಾ ಎಲ್ಲ ಕೋರ್ಸುಗಳು | 820/- | 50+10 | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ | ಅದೇ |

ಮ್ಯಾನುವಲ್/ಗಣಕಿಕೃತ ಪರೀಕ್ಷಾ ಅರ್ಜಿಗಳನ್ನು ವಿಭಾಗದ ಮುಖ್ಯಸ್ಥರು/ಪ್ರಾಂಶುಪಾಲರು ಈ ಅರ್ಜಿಗಳನ್ನು ವಿಶ್ವವಿದ್ಯಾಲಯದಿಂದ ತಾವೇ ಪಡೆದುಕೊಳ್ಳುವ ವ್ಯವಸ್ಥೆ ಮಾಡಬೇಕು. ಈ ಬಗೆಯಲ್ಲಿ ಪಡೆಯಲಾದ ಗಣಕಿಕೃತ/ಮ್ಯಾನುವಲ್ ಅರ್ಜಿಗಳಿಗೆ ರೂ.35.00 ಪ್ರತಿ ಅರ್ಜಿಗೆ ದರದಂತೆ ಪೂರ್ಣ ಪಾವತಿ ಮಾಡಿ ಕುಲಸಚಿವರು (ಮೌಲ್ಯಮಾಪನ) ಗು.ವಿ. ಗುಲಬರ್ಗಾ ಇವರಿಂದ ಪಡೆಯಬಹುದು. ಈ ಹಣವನ್ನು ವಿತ್ತಾಧಿಕಾರಿಗಳು ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ ಇವರ ಹೆಸರಿಗೆ ಡಿ.ಡಿ. ಮೂಲಕವಾಗಲಿ ಅಥವಾ ಗುಲಬರ್ಗಾ ವಿಶ್ವವಿದ್ಯಾಲಯದ ಸ್ಟೇಟ ಬ್ಯಾಂಕ ಆಫ್ ಹೈದ್ರಾಬಾದದಲ್ಲಿ ಬ್ಯಾಂಕ ಚಾಲನ್ ಮುಖಾಂತರ ಪಾವತಿಸಬಹುದು.

ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಾಗ ಮುಖ್ಯಸ್ಥರು/ಪ್ರಾಂಶುಪಾಲರು ಈ ಕೆಳಗಿನ ಮಾಹಿತಿಗಳನ್ನು ವಿಶೇಷವಾಗಿ ಗಮನಿಸಲು ಸೂಚಿಸಲಾಗಿದೆ.

೦೧. ಪರೀಕ್ಷಾ ಕೇಂದ್ರದ ಬದಲಾವಣೆಗೆ ಅವಕಾಶವಿರುವದಿಲ್ಲ.

೦೨. ಅಂಕಪಟ್ಟಿಗಳ ಪ್ರತಿಗಳನ್ನು ಆಯಾ ವಿಭಾಗದ ಮುಖ್ಯಸ್ಥರು/ಪ್ರಾಂಶುಪಾಲರೇ ದೃಢೀಕರಿಸಬೇಕು.

೦೩. ವಿನಾಯತಿ (Exemptions) ಪಡೆದ ಬಗ್ಗೆ ಹಾಗೂ ಹಿಂದಿನ ಪರೀಕ್ಷೆಯ ಪಾಸಾದ ಬಗ್ಗೆ ದೃಢೀಕರಿಸಲ್ಪಟ್ಟ ಝೆರಾಕ್ಸ ಪ್ರತಿಗಳನ್ನು ಲಗತ್ತಿಸಬೇಕು.

೦೪. ವಿಶ್ವವಿದ್ಯಾಲಯಕ್ಕೆ ಅರ್ಜಿಗಳನ್ನು ಕಳುಹಿಸುವ ಮೊದಲು ಅವುಗಳನ್ನು ಚೆನ್ನಾಗಿ ಪರಿಶೀಲಿಸಬೇಕು.

೦೫. ಪರೀಕ್ಷಾ ಅರ್ಜಿಗಳ ಕ್ರಮ ಸಂಖ್ಯೆಗಳು ಅನುಕ್ರಮವಾಗಿರುವಂತೆ ನೋಡಿಕೊಳ್ಳಬೇಕು.

೦೬. ಪರೀಕ್ಷಾ ಅರ್ಜಿಗಳ ಜೊತೆ ಆಕರಣೆ ಮಾಡಿದ ಪರೀಕ್ಷಾ ಶುಲ್ಕದ ವಿವರವನ್ನು ತೋರಿಸುವ ಪಟ್ಟಿಯನ್ನು ತ್ರಿಪ್ರತಿಯಲ್ಲಿ ಲಗತ್ತಿಸಬೇಕು.

೦೭. ಪ್ರವೇಶ ಪತ್ರದ ಮೇಲೆ ಅಂಟಿಸಲ್ಪಟ್ಟಿರುವ ಅಭ್ಯರ್ಥಿಗಳ ಭಾವಚಿತ್ರದ ಮೇಲೆ ಮುಖ್ಯಸ್ಥರು/ಪ್ರಾಂಶುಪಾಲರ ಸಹಿ ಇರತಕ್ಕದ್ದು.

೦೮. ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡ ಹಾಗೂ ಕೆಟಗರಿ-೧, ಕೆಟಗರಿ-೨(ಎ), ಕೆಟಗರಿ-೨(ಬಿ), ಕೆಟಗರಿ-೩(ಎ), ಕೆಟಗರಿ-೩(ಬಿ), ಸಾಮಾನ್ಯ ಅಭ್ಯರ್ಥಿಗಳ ಹೆಸರುಗಳನ್ನು ಹಾಗೂ ಅವರಿಂದ ಪಡೆದ ಶುಲ್ಕದ ವಿವರಗಳನ್ನು ತೋರಿಸುವ ಪ್ರತ್ಯೇಕ ಪಟ್ಟಿ (ದ್ವಿಪ್ರತಿ) ಯನ್ನು ಕುಲಸಚಿವರು (ಮೌಲ್ಯಮಾಪನ), ಇವರಿಗೆ ಹಾಗೂ ಸದರಿ ಪಟ್ಟಿಯ ಮತ್ತೊಂದು ಪ್ರತಿಯನ್ನು ವಿತ್ತಾಧಿಕಾರಿಗಳು ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ ಇವರಿಗೆ ಕಳುಹಿಸಿಕೊಡಬೇಕು.

೦೯. ಯಾವುದೇ ಪರಿಸ್ಥಿತಿಯಲ್ಲಿ ಅಧಿಸೂಚನೆಯಲ್ಲಿ ನಿಗದಿಪಡಿಸಿ ತಿಳಿಸಿದ ಕೊನೆಯ ದಿನಾಂಕ ಮುಗಿದ ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಎಸ.ಸಿ/ಎಸ.ಟಿ/ಕೆಟಗರಿ-೧, ಕೆಟಗರಿ-೨(ಎ), ಕೆಟಗರಿ-೨(ಬಿ), ಕೆಟಗರಿ-೩(ಎ) ಮತ್ತು ಕೆಟಗರಿ-೩(ಬಿ) ಗುಂಪಿಗೆ ಸೇರಿದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಪಾವತಿ ಮಾಡಲು ವಿನಾಯಿತಿ ಇರುತ್ತದೆ. ಆದರೆ ಪರೀಕ್ಷಾ ಅರ್ಜಿ ಶುಲ್ಕ, ಅಂಕಪಟ್ಟಿ ಶುಲ್ಕ ಮತ್ತು ಸ್ಟ್ರೂಟನಿ ಶುಲ್ಕ ಪಾವತಿ ಮಾಡಬೇಕಾಗುತ್ತದೆ. ಸದರಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಆಯಾ ಸರ್ಕಾರಿ ಇಲಾಖೆಯಿಂದ ಪಡೆದು ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡುವ ಜವಾಬ್ದಾರಿ ಆಯಾ ವಿಭಾಗದ ಮುಖ್ಯಸ್ಥರು/ಮಹಾವಿದ್ಯಾಲಯಗಳ ಪ್ರಾಂಶುಪಾಲರ ಹೊಣೆಯಾಗಿರುವದು. ಒಂದು ವೇಳೆ ಸಂದಾಯ ಮಾಡಿದ್ದಲ್ಲಿ ಇದನ್ನು ಆಯಾ ಕಾಲೇಜಿನಿಂದ ಭರಿಸಿಕೊಳ್ಳಲಾಗುವದು. ಶುಲ್ಕದ ವಿನಾಯಿತಿ ಪಡೆದವರ ವಿವರಗಳೊಂಡ ಪಟ್ಟಿಯ ಒಂದು ಪ್ರತಿಯನ್ನು ಹಣಕಾಸು ಅಧಿಕಾರಿ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ ಇವರಿಗೂ ಮತ್ತೊಂದು ಪ್ರತಿಯನ್ನು ಈ ವಿಭಾಗಕ್ಕೂ ಸಲ್ಲಿಸಬೇಕು. ಶುಲ್ಕ ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಜಾತಿ ಪ್ರಮಾಣ ಪತ್ರವನ್ನು ಆಯಾ ತಹಶೀಲ್ದಾರರಿಂದ ಪಡೆದು ಅರ್ಜಿ ಜೊತೆ ಲಗತ್ತಿಸತಕ್ಕದ್ದು.

ಯಾವುದೇ ಕಾರಣಕ್ಕಾಗಿ ಪರೀಕ್ಷೆಗಳು ಮುಂದೂಡಲ್ಪಟ್ಟಿದ್ದಲ್ಲಿ ಶುಲ್ಕ ಪಾವತಿಸುವ ದಿನಾಂಕಗಳು ಬದಲಾವಣೆಯಾಗುವುದಿಲ್ಲ.

ಅಭ್ಯರ್ಥಿಗಳಿಂದ ಪಾವತಿಸಲಾದ ಅರ್ಜಿ ಪರಿಶೀಲನಾ ಶುಲ್ಕ ರೂ.10ರಲ್ಲಿ ರೂ.5ನ್ನು ಪ್ರತ್ಯೇಕ ಹುಂಡಿ ಮುಖಾಂತರ ವಿಶ್ವವಿದ್ಯಾಲಯದ ಸ್ಟೇಟ ಬ್ಯಾಂಕ ಆಫ್ ಹೈದ್ರಾಬಾದ ಶಾಖೆಯಲ್ಲಿ ಪಾವತಿಯಾಗುವಂತೆ ಕುಲಸಚಿವರು (ಮೌಲ್ಯಮಾಪನ) ಇವರ ಹೆಸರಿನಲ್ಲಿ ಎಲ್ಲ ಪರೀಕ್ಷಾ ಅರ್ಜಿ ಪರಿಶೀಲನಾ ಶುಲ್ಕದ ಮೊತ್ತವನ್ನು ಒಂದೇ ಹಂತದಲ್ಲಿ ಕಳುಹಿಸಬೇಕು. ರೂ.750ರ ದಂಡ ಶುಲ್ಕ ದಿನಾಂ ಮುಗಿದ ಮೇಲೆ ಕಳುಹಿಸಬೇಕು.

೨೦೧೧ನೇ ಸಾಲಿನಲ್ಲಿ ನಡೆಸಲಾದ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿದ್ದು ಇಲ್ಲವೇ ಪರೀಕ್ಷಾ ಫಲಿತಾಂಶ ಪ್ರಕಟವಾಗದಂತಹ ಅಭ್ಯರ್ಥಿಗಳನ್ನು ಅವರ ಪರೀಕ್ಷಾ ಫಲಿತಾಂಶ ಪ್ರಕಟವಾದ ೧೫ ದಿವಸಗಳೊಳಗಾಗಿ ಇಲ್ಲವೇ ವಿಶ್ವವಿದ್ಯಾಲಯ ನಿಗದಿಪಡಿಸಿದ ಪರೀಕ್ಷಾ ಪ್ರಾರಂಭ ದಿನಾಂಕಕ್ಕಿಂತ ಮೊದಲು ಇವೆರೆಡರಲ್ಲಿ ಯಾವುದು ಮೊದಲೋ ಅಂಥಹ ಅರ್ಜಿಗಳನ್ನು ದಂಡ ಶುಲ್ಕವಿಲ್ಲದೆ ಮಾನ್ಯ ಮಾಡಲಾಗುವುದು.

ಅರ್ಜಿಗಳು ವಿಶ್ವವಿದ್ಯಾಲಯಕ್ಕೆ ವಿಭಾಗದ ಮುಖ್ಯಸ್ಥರು/ಮಹಾವಿದ್ಯಾಲಯಗಳ ಪ್ರಾಂಶುಪಾಲರ ಮುಖಾಂತರವೇ ಸಲ್ಲಿಸತಕ್ಕದ್ದು, ಅಭ್ಯರ್ಥಿಗಳು ನೇರವಾಗಿ ಸಲ್ಲಿಸಕೂಡದು. ಅಭ್ಯರ್ಥಿಗಳು ಪರೀಕ್ಷೆಯಲ್ಲಿ ತಮ್ಮ ಉತ್ತರಗಳನ್ನು ಕೇವಲ ಇಂಗ್ಲೀಷ್ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಮಾತ್ರ ಬರೆಯಲು ಅವಕಾಶವಿದೆ. ಉಳಿದ ಭಾಷೆಗಳಲ್ಲಿ ಬರೆಯತಕ್ಕದ್ದಲ್ಲ ಎಂಬುದನ್ನು ವಿಭಾಗದ ಮುಖ್ಯಸ್ಥರು/ ಕಾಲೇಜು ಪ್ರಾಂಶುಪಾಲರು ಅಭ್ಯರ್ಥಿಗಳ ಗಮನಕ್ಕೆ ತರಬೇಕು. ವಿದ್ಯಾರ್ಥಿಗಳು ಇಂಗ್ಲೀಷ ಇಲ್ಲವೆ ಕನ್ನಡ ಮಾಧ್ಯಮದಲ್ಲಿ ಬರೆಯದೇ ಬೇರೆ ಮಾಧ್ಯಮದಲ್ಲಿ ಬರೆದರೆ ಅಂತಹ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಮೌಲ್ಯಮಾಪನವಾಗದೇ ಉಳಿಯುತ್ತವೆ. ಅಂಥಹ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ಅನೂರ್ಜಿತಗೊಳಿಸಲಾಗುವುದೆಂದು ಅಭ್ಯರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕು. ಇದು ಭಾಷಾ ವಿಷಯಗಳಿಗೆ ಅನ್ವಯವಾಗುವುದಿಲ್ಲ.

ಪರೀಕ್ಷಾ ಶುಲ್ಕವನ್ನು ಒಮ್ಮೆ ಪಾವತಿ ಮಾಡಿದ ನಂತರ ಯಾವುದೇ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ ಇಲ್ಲವೆ ಮುಂಬರುವ ಪರೀಕ್ಷೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ. ಅಪೂರ್ಣ ಹಾಗೂ ಪರಿಪೂರ್ಣವಿಲ್ಲದ ಅರ್ಜಿಗಳನ್ನು ವಿಶ್ವವಿದ್ಯಾಲಯ ಸ್ವೀಕೃತ ಮಾಡುವುದಿಲ್ಲ. ಅಲ್ಲದೇ ಇಂತಹ ವಿಷಯಗಳಿಗೆ ಪತ್ರ ವ್ಯವಹಾರಕ್ಕೆ ಆಸ್ಪದವಿರುವುದಿಲ್ಲ.

ವಿಭಾಗದ ಮುಖ್ಯಸ್ಥರು/ಪ್ರಾಂಶುಪಾಲರು ತಮ್ಮ ಕಚೇರಿಯ ಸಿಬ್ಬಂಧಿಗಳಿಗೆ ಈ ಅಧಿಸೂಚನೆಯಲ್ಲಿ ತಿಳಿಸಿದ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಅವರದಾಗಿರಬೇಕೆಂದು ಮನವರಿಕೆ ಮಾಡಿಕೊಡುವಂತೆ ವಿನಂತಿಸಲಾಗಿದೆ.

ಕುಲಸಚಿವರು (ಮೌಲ್ಯಮಾಪನ)
ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಗೆ,

೧. ಮುಖ್ಯಸ್ಥರು ಸ್ನಾತಕೋತ್ತರ ವಿಭಾಗಗಳು ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ
೨. ನಿರ್ದೇಶಕರು:ವಿಶೇಷಾಧಿಕಾರಿಗಳು ಸ್ನಾತಕೋತ್ತರ ಕೇಂದ್ರ ಕೃಷ್ಣದೇವರಾಯನಗರ ಸಂಡೂರ, ಬಳ್ಳಾರಿ, ರಾಯಚೂರು ಮತ್ತು ಬೀದರ
೩. ಪ್ರಾಂಶುಪಾಲರು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳ ಕಾಲೇಜುಗಳಿಗೆ.
೪. ಪ್ರಾಂಶುಪಾಲರು ಪಿ.ಜಿ. ಡಿಪ್ಲೋಮಾ ಕೋರ್ಸಿಗೆ ಸಂಬಂಧಟ್ಟ ಎಲ್ಲ ಮಹಾವಿದ್ಯಾಲಯಗಳಿಗೆ.

ಪ್ರತಿಗಳು: ೧. ಉನ್ನತ ಶಿಕ್ಷಣ ಸಚಿವರ ಆಪ್ತ ಶಾಖೆ ಕರ್ನಾಟಕ ಸರ್ಕಾರ ವಿಧಾನ ಸೌಧ, ಬೆಂಗಳೂರು ೨. ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ ಬೆಂಗಳೂರು
೩. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು ೪. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು